ಮೈಸೂರ ಗೆಜೆಟ್ಟು.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 8.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 25, ಸ್ ೧೯೦೪.

IIನೆ ಭಾಗ.

ಇಂಡ್ಯೆಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂಬರು 2, ತಾರೀಖು 12ನೆ ಫೆಬ್ರವರಿ ಸ್ ೧೯೦೪ನೆ ಇಸವಿ.

ಇನಾಂದಾರ್ರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಶ್ರೀರಂಗಪಟ್ಣ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್ ಡೀಡ್ ಯಾನೆ ಖಾಯಂ ಪಟ್ಟೆಗಳು (100) ನ್ಯೆಸೂರು ಡಿಸ್ಟ್ರಿಕ್ಟು ಡಿಪ್ಯುಟಿ ಕಮಿಷನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರಿ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರ್ರು ಏರ್ಪ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟೀಸುಗಳನ್ನು ದೇರ್ ಮೂಡದೆ ಕೊಡತಕ್ಕದ್ದೆಂದು ನೇಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ಯಾಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್ಸ್, ಮೈಸೂರು.

ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್ ಡಿ. ನಂಬರು 47.

ತಾರೀಖು 16ನೆ ಫೆಬ್ರವರಿ ಸ್ ೧೯೦೪ನೆ ಇಸವಿ.

1. ಉರ್ದು ಸ್ಕೂಲ್‌ಗಳ II, IIIನೆ ತರಗತಿಗಳಲ್ಲಿ ಹಾಲಿ ಉಪಯೋಗಿಸುತ್ತಲಿರುವ ಖುಲಾಸತ್ ಉಲ್‌ಖ್ವಾನ್ಸಿ ಐವಜಿಯಲ್ಲಿ ಖವಾಯಿದೆ ಉರ್ದು I, IIನೆ ಭಾಗಗಳನ್ನೂ, Vನೆ ತರಗತಿಯಲ್ಲಿ ಜಬ್ದತ್ ಉಲ್‌ಖ್ವಾನ್ಸಿ ಐವಜಿಯಲ್ಲಿ ಖವಾಯಿದೆ ಫಾರ್ಸಿಯನ್ನೂ ಮತ್ತೊಂದು ನೋಟಿನಿ ಕೊಡುವವರಗು ಉಪಯೋಗಿಸಬಹುದು.

2. ಮ್ಯಾಕ್ಫರ್ಲರವರ ಹಿಂದೂ ದೇಶದ ಚರಿತ್ರ ಸಂಗ್ರಹದ ಐವಜಿಯಲ್ಲಿ ರೆವರೆಂಡ್ ಈ. ಸೆಲ್‌ಯವರ ಉರ್ದು ಹಿಂದೂದೇಶದ ಚರಿತ್ರೆಯಲ್ಲಿನ ಸುಲಭ ಕಥೆಗಳನ್ನು ಉಪಯೋಗಿಸಬಹುದು.

3. ಉರ್ದು ಸ್ಕೂಲ್‌ಗಳ IV, Vನೆ ತರಗತಿಗಳಲ್ಲಿ ಜಕ್ಕವರ್ತಿಯವರ ಉರ್ದು ಗಣಿತ II, IIIನೆ ಭಾಗಗಳನ್ನು ನಿಯಮಿಸಿರುತ್ತೆ.

ಹೆಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್.